# ಹಾಸನ ಜಿಲ್ಲಾ ದಂಡಾಧಿಕಾರಿಗಳ ನಡವಳಿಕೆಗಳು

ಸಂಖ್ಯೆ: ಎಂಎಜಿ 28:95-96.

ದಿನಾಂಕ 18-4-1995.

ವಿಷಯ:- ಚನ್ನರಾಯಪಟ್ಟಣ ತಾಲ್ಲೂಕು ಆನೇಕೆರೆ ಜಾತ್ರೆಗೆ ಕೋಣಗಳನ್ನು ತರದಂತೆ ನಿರ್ಬಂಧಿತ ನಿಷೇದಾಜ್ಞೆ ಹೊರಡಿಸುವ ವಿಚಾರ.

ಉಲ್ಲೇಖ:- ಚನ್ನರಾಯಪಟ್ಟಣ ತಹಸೀಲ್ದಾರ್‌ರವರ ವರದಿ ನಂ.ಎಂಎಜಿ 3:95-96 ದಿನಾಂಕ 18-4-95.

---

**ಪ್ರಸ್ತಾವನೆ:**

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಆನೇಕೆರೆ ಗ್ರಾಮದಲ್ಲಿ ನಡೆಯುವ ಗ್ರಾಮ ದೇವತೆಯ ಜಾತ್ರೆಯಲ್ಲಿ ಕೋಣಗಳನ್ನು ಬಲಿ ಕೊಡುವ ಸಂಪ್ರದಾಯವಿದ್ದು, ಅದನ್ನು ತಡೆಯಲು ಕೆಲವು ಸಂಘಟನೆಗಳು ಪ್ರಯತ್ನಿಸಲಿದ್ದು, ಶಾಂತಿಗೆ ಭಂಗವುಂಟಾಗುವ ಸಂಭವವಿರುವುದಾಗಿಯೂ, ಆದುದರಿಂದ ಜಾತ್ರೆ ಪ್ರದೇಶದೊಳಗೆ ಕೋಣ ಅಥವಾ ಎಮ್ಮೆಕರುಗಳನ್ನು ಹಾಗೂ ಮಾರಕಾಸ್ತ್ರಗಳನ್ನು ತರದಂತೆ ನಿಷೇದಾಜ್ಞೆ ಜಾರಿ ಮಾಡಲು ಉಲ್ಲೇಖಿತ ಪತ್ರದಲ್ಲಿ ವರದಿ ಬಂದಿರುತ್ತೆ. ಸದರಿ ವರದಿಯನ್ನು ಪರಿಶೀಲಿಸಿರುತ್ತೆ. ಶಾಂತಿಗೆಭಂಗ ಉಂಟಾಗುವ ಸಾಧ್ಯತೆ ಇರುವುದು ಮನವರಿಕೆಯಾಗಿರುತ್ತೆ.

ಜಾತ್ರೆಯ ದಿನಗಳಂದು ಈ ಪ್ರದೇಶದಲ್ಲಿ ಮಧ್ಯ ಮಾರಾಟದ ನಿಷೇದವು ಸಹ ಅವಶ್ಯಕತೆ ಇರುವುದನ್ನು ಮನಗಾಣಲಾಗಿದೆ. ಜಾತ್ರೆಯಲ್ಲಿ ಜನ ಸಂದಣಿ ಇರುವುದರಿಂದ ಮಧ್ಯ ಮಾರಾಟದ ನಿಷೇಧದ ಅವಶ್ಯಕತೆ ಇರುತ್ತದೆ. ಆದುದರಿಂದ ಈ ಆದೇಶ ಹೊರಡಿಸಲಾಗಿದೆ.

## -:: ಆ ದೇ ಶ ::-

ಹಾಸನ ಜಿಲ್ಲೆಯ ಜಿಲ್ಲಾಧಿಕಾರಿ ಮಹೇಂದ್ರ ಜೈನ್, ಐ.ಎ.ಎಸ್., ಆದ ನಾನು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 144 ರಲ್ಲಿ ದತ್ತವಾದ ಅಧಿಕಾರವನ್ನು ಉಪಯೋಗಿಸಿ ಚನ್ನರಾಯಪಟ್ಟಣ ತಾಲ್ಲೂಕು ಆನೇಕೆರೆ ಗ್ರಾಮದಲ್ಲಿ ಗ್ರಾಮ ದೇವತೆಯ ಜಾತ್ರೆ ನಡೆಯುವ ಪ್ರದೇಶದಲ್ಲಿ 5 ಕಿ.ಮೀ. ಸುತ್ತಳತೆ ಪ್ರದೇಶದಲ್ಲಿ ಮಾರಕವಾದ ಅಸ್ತ್ರಗಳನ್ನು ಹಿಡಿದಾಡುವುದನ್ನು ಮತ್ತು ಬಲಿ ಕೊಡಲು ಸಾಧ್ಯತೆ ಇರುವ ಕೋಣ ಮತ್ತು ಎಮ್ಮೆ ಕರುಗಳನ್ನು ತರುವುದನ್ನು ದಿನಾಂಕ 18-4-95 ರ ಬೆಳಿಗ್ಗೆ 10-00 ಗಂಟೆಯಿಂದ ದಿನಾಂಕ 19-4-95ರ ಸಂಜೆ 6-00 ಗಂಟೆವರೆಗೆ ನಿಷೇಧಿಸಿ ಈ ಮೂಲಕ ಆದೇಶಿಸಿರುತ್ತೇನೆ.

ಅಲ್ಲದೆ ಆನೇಕೆರೆ ಗ್ರಾಮದಲ್ಲಿ ಗ್ರಾಮ ದೇವತೆಯ ಜಾತ್ರೆ ನಡೆಯುವ ಪ್ರದೇಶದ ಸುತ್ತ ಮುತ್ತ 5 ಕಿ.ಮೀ. ವ್ಯಾಪ್ತಿಯಲ್ಲಿ ದಿನಾಂಕ 18-4-95ರ ಬೆಳಿಗ್ಗೆ 10-00 ಗಂಟೆಯಿಂದ ದಿನಾಂಕ 19-4-95ರ ಸಂಜೆ 6-00 ಗಂಟೆವರೆಗೆ ಮಧ್ಯ. ಮಾರಾಟ ಮಾಡುವುದನ್ನು ಸಹ 1965ರ ಕರ್ನಾಟಕ ಅಬ್ಕಾರಿ ಅಧಿನಿಯಮದ 21ನೇ ಪ್ರಕರಣದ ಮೇರೆ ಈ ಮೂಲಕ ನಿಷೇಧಿಸಿರುತ್ತೇನೆ.

(ಮಹೇಂದ್ರ ಜೈನ್),
ಜಿಲ್ಲಾ..ದಂಡಾಧಿಕಾರಿಗಳು,
ಹಾಸನ ಜಿಲ್ಲೆ, ಹಾಸನ.

1) ಆರಕ್ಷಕ ಅಧೀಕ್ಷಕರು, ಹಾಸನ
2) ಡಿ.ವೈ.ಎಸ್.ಪಿ. ಅರಸೀಕೆರೆ.
3) ಆರಕ್ಷಕ ನಿರೀಕ್ಷಕರು : ಉಪ ನಿರೀಕ್ಷಕರು, ಚನ್ನರಾಯಪಟ್ಟಣ
4) ತಹಸೀಲ್ದಾರ್, ಚನ್ನರಾಯಪಟ್ಟಣ
5) ಉಪ ಆಯುಕ್ತರು, ಅಬ್ಕಾರಿ ಇಲಾಖೆ, ಹಾಸನ
6) ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಹಾಸನ.

ಲತ: